ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳು

3175 -ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳು ಯಾವುವು?

ಆ) ಈ ರಸ್ತೆಗಳಲ್ಲಿ ಸಂಚಾರ ಯೋಗ್ಯ ರಸ್ತೆಗಳು ಯಾವುವು? ಸಂಚಾರ ಯೋಗ್ಯವಲ್ಲದ ರಸ್ತೆಗಳು ಯಾವುವು?

ಇ) ಸಂಚಾರ ಯೋಗ್ಯವಲ್ಲದ ಯಾವ ಯಾವ ರಸ್ತೆಗಳಿಗೆ ಸಂಚಾರ ಯೋಗ್ಯಗೊಳಿಸಲು ಎಷ್ಟು ವೆಚ್ಚವಾಗುವುದು?

ಈ) ಈ ರಸ್ತೆಗಳನ್ನು ಸಂಚಾರ ಯೋಗ್ಯಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಧರ್ಮ್‌ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ಒಟ್ಟು 17 ರಸ್ತೆಗಳ ಪೈಕಿ 6 ರಸ್ತೆಗಳು ಸುಸ್ಥಿತಿಯಲ್ಲಿವೆ. ಎಂಟು ರಸ್ತೆಗಳು ಇತ್ತೀಚಿನ ಮಳೆಯಿಂದ ಹಾನಿಗೊಳಗಾಗಿದ್ದು, ಸುಲಲಿತ ಸಂಚಾರಕ್ಕೆ ಸ್ವಲ್ಪ ಅಡಚಣೆಯಾಗಿವೆ. ಉಳಿದ 3 ರಸ್ತೆಗಳು ಈಗ ಮೈಸೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿವೆ. ಪೂರ್ಣವಾಗಿ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆ ಯಾವುವು ಇರುವುದಿಲ್ಲ.

ಇ) ಬಾರಿ ಮಳೆಯಿಂದ ಹಾಳಾಗಿರುವ ರಸ್ತೆಗಳನ್ನು ದುರಸ್ತಿಪಡಿಸಲು ರೂ. 80.00 ಲಕ್ಷ ಬೇಕಾಗುವುದೆಂದು ಅಂದಾಜಿಸಲಾಗಿದೆ.

ಈ) ಸತತ ಮಳೆಯಿಂದ ಹದಗೆಟ್ಟಿರುವ ರಸ್ತೆಗಳ ಅತ್ಯಂತ ತುರ್ತು ಕಾಮಗಾರಿ ಮತ್ತು ಗುಂಡಿಗಳನ್ನು ಮುಚ್ಚಿ ಸಂಚಾರಕ್ಕೆ ಅಡಚಣೆಯಿಲ್ಲದೆ ರಸ್ತೆಯನ್ನು ದುರಸ್ತಿ ಮಾಡಲಾಗುತ್ತಿದೆ.

ಅನುಬಂಧ - 1 ಎಲ್‌ಎಕ್ಯೂ 4222

ಮೈಸೂರು ವಿಭಾಗ, ಮೈಸೂರು ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿರುವ ನಗರ ರಸ್ತೆಗಳ ವಿವರ

ಕ್ರಮ ಸಂಖ್ಯೆ	ರಸ್ತೆಗಳ ಹೆಸರು	ರಸ್ತೆಯ ದರ್ಜೆ	ರಸ್ತೆಯ ಒಟ್ಟು ಉದ್ದ	ಲೋಕೋಪಯೋಗಿ ಇಲಾಖೆಯ ವಶದಲ್ಲಿರುವುದು
1.	ನಗರ ಜಿಲ್ಲಾ ಕಛೇರಿಗೆ ಸೇರುವ ಅಪ್ರೋಚ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	0.30	0.30
2.	ವೆಸ್ಟನ್ ಗೇಟ್‌ನಿಂದ ಜಿಲ್ಲಾ ಕಛೇರಿಗೆ ಸೇರುವ ರಸ್ತೆ	ಜಿಲ್ಲಾ ಮುಖ್ಯರಸ್ತೆ	1.30	1.30
3.	ಝೂನ್ಸಿ ಲಕ್ಷ್ಮೀಬಾಯಿ ರಸ್ತೆ	ಜಿಲ್ಲಾ ಮುಖ್ಯರಸ್ತೆ	4.40	0.00
4.	ಡಾ. ಅಂಬೇಡ್ಕರ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	2.00	2.00
5.	ಮೈಸೂರು ಮಾನಂದವಾಡಿ ರಸ್ತೆ (ಪ್ರಭುದೇವ ಟಾಕೀಸಿನಿಂದ ನಂಜುಮಳಿಗೆ)	ಜಿಲ್ಲಾ ಮುಖ್ಯರಸ್ತೆ	1.00	1.00
6.	ಶೇಷಾದ್ರಿ ಅಯ್ಯರ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	1.10	1.10
7.	ಫ್ರಿನ್ಸೆಸ್	ಜಿಲ್ಲಾ ಮುಖ್ಯರಸ್ತೆ	4.40	3.83
8.	ನ್ಯೂ ಬನ್ನಿಮಂಟಪ ರಸ್ತೆ ಹಾಗೂ ಡೀವಿಯೇಷನ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	5.80	3.85
9.	ಅಶೋಕ ರಸ್ತೆ	ಜಿಲ್ಲಾ ಮುಖ್ಯರಸ್ತೆ	2.20	2.20
10.	ಹೈದರಾಲಿ ರಸ್ತೆ	ಜಿಲ್ಲಾ ಮುಖ್ಯರಸ್ತೆ	2.80	0.00
11.	ಅಬ್ಬಾಸ್ ಅಲಿ ರಸ್ತೆ	ಜಿಲ್ಲಾ ಮುಖ್ಯರಸ್ತೆ	0.40	0.40
12.	ಗೌರ್ನಮೆಂಟ್ ಹೌಸ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	0.80	0.80
13.	ರೇಸ್‌ಕೋರ್ಸ್ ರಸ್ತೆ (ಮಾನಸ ರಸ್ತೆ)	ಜಿಲ್ಲಾ ಮುಖ್ಯರಸ್ತೆ	2.40	2.06
14.	ಕಾರಂಜಿ ಟ್ಯಾಂಕ್ ರಸ್ತೆ	ಜಿಲ್ಲಾ ಮುಖಿರಸ್ತೆ	1.40	0.00
15.	ನರಸಿಂಹರಾಜ ಬುಲ್‌ಯಾರ್ಡ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	0.90	0.90
16.	ಲಲಿತಮಹಲ್ ರಸ್ತೆ	ಜಿಲ್ಲಾ ಮುಖ್ಯರಸ್ತೆ	1.00	1.00
17.	ಆಯುರ್ವೇದಿಕ್ ರಸ್ತೆಯಿಂದ ರಸ್ತೆ ಸ್ಟೇಷನ್ ವೃತ್ತದವರೆಗೆ	ಜಿಲ್ಲಾ ಮುಖ್ಯರಸ್ತೆ	0.62	0.62
		ಒಟ್ಟು	**32.82**	**21.36**